

ಚೀರಿದಳು. ಕೆಂಚ ದಿಡಗ್ಗನೆ ಎದ್ದು ಕುಳಿತು 'ಏನಾತ್‌ಲೇ?' ಎಂದ ಜೋರಾಗಿ. ಅವನ ಮನೆ ಮುಂದೆ ಕಟಕಟ ಹಲ್ಲುಕಡಿಯುತ್ತ ನಿಂತಿದ್ದ ಸನಾಯಿಗೌಡ 'ಹೊರಾಗ್ ಬಾ ಲೇ ಮಿಂಡ್ರಿಮಗನ ಇವತ್ ನಿನ್ ತಿಥಿ ಆಗತ್ತು.' ಎಂದು ಅಬ್ಬರಿಸಿದ. ಅವನ ದನಿ ಕೇಳಿದ್ದೇ ಕೆಂಚನ ನಿದ್ದೆಯೆಲ್ಲಾ ಹಾರಿ ಹೋಯಿತು. ಥರ ಥರ ನಡುಕ ಹುಟ್ಟಿತು. ಮೈ ಕೈಯೆಲ್ಲಾ ಹಸಿಹಸಿ ಆದವು. ಎದ್ದು ಬಡಬಡ ಲುಂಗಿ ಉಟ್ಟುಕೊಳ್ಳತೊಡಗಿದ. ಸುಮಂಗ್ಲಿಗಂತು ತನಗೆ ಚಪ್ಪಲಿ ಒಗೆದದ್ದಲ್ಲದೆ ಈಗ ತನ್ನ ಗಂಡನಿಗೆ ಕೊಲ್ಲುವ ಬೆದರಿಕೆ ಹಾಕುತ್ತಿರುವ ಗೌಡನ ಬಗ್ಗೆ ಸಿಟ್ಟು ಮೂಡಿ ಕುದಿಯತೊಡಗಿದಳು.

ಶೆಟ್ಟಿಯಿಂದ ಚಪ್ಪಲಿಯೇಟು ತಿಂದು ರೊಚ್ಚಿಗೆದ್ದು ಬಂದಿದ್ದ ಗೌಡ ಕೆಂಚನ ಮನೆಬಾಗಿಲು ತೆಗೆದಿರೋದು ಕಂಡಿದ್ದೇ ಚಪ್ಪಲಿ ತೆಗೆದು ಬೀಸಿದ್ದ. ಈಗ ಕಣ್ಮುಂದೆ ಬಂದವರನ್ನು ನುಂಗಲು ಸಿದ್ದವಾಗಿರುವ ಹೆಬ್ಬಾವಿನಂತೆ ಬುಸುಗುಡುತ್ತ ನಿಂತಿದ್ದ. ಕಣ್ಣು ಕೆಂಪು ಕೆಂಪಾಗಿ ಕುದಿಯುತ್ತಿದ್ದವು. ಕೆಂಚ ಬೇಗ ಹೊರಗೆ ಬರದಿದ್ದುದು ಅವನ ಸಿಟ್ಟಿಗೆ ಮತ್ತಷ್ಟು ಉಪ್ಪು ಹಾಕಿದ ಹಾಗಾಯ್ತು. 'ಹೊರಗ್ ಬಾ ಲೇ ಹೆಣ್ಯಾ.. ಒಳಾಗ್ ಕುಂತು ಏನ್ ಹಡ್ದಾಕ್ ಹತ್ತಿ? ನಿಮ್ಮೌನ್ ನಿನ್ ಇವತ್ ಬುಡಂಗಿಲ್ಲಾ ನಾ' ಎಂದು ಮತ್ತೆ ಅಬ್ಬರಿಸಿದ. ಕೆಂಚ ಲುಂಗಿ ಹಂಗಂಗೇ ತೊಟ್ಟುಕೊಂಡು ಕೈಕಟ್ಟಿ ಡೊಗ್ಗಿಕೊಂಡು ಹೊರಗೆ ಬಂದ. ಅವನ ಮುಖ ನೋಡಿದ್ದೇ ಮತ್ತಷ್ಟು ರೊಚ್ಚಿಗೆದ್ದ ಗೌಡ ಉಳಿದಿದ್ದ ಇನ್ನೊಂದು ಚಪ್ಪಲಿಯನ್ನೂ ಕೈಗೆ ತೆಗೆದುಕೊಂಡು ಅವನ ಮುಖಕ್ಕೆ ಬೀಸಿದ. ಆ ಚಪ್ಪಲಿಯನ್ನು ಕ್ಯಾಚು ಹಿಡಿದ ಕೆಂಚ ಮತ್ತಷ್ಟು ಡೊಗ್ಗಿಕೊಂಡು 'ತಪ್ಪಾತ್ರಿ ಗೌಡ್ರ ನನ್ ತಪ್ಪಾತ್ರಿ ಸಿಟ್ ಮಾಡ್ಕ್ಯಾಬ್ಯಾಡ್ರಿ ಸಿಟ್ ಮಾಡುಕ್ಯಾಬ್ಯಾಡ್ರಿ' ಎನ್ನುತ್ತ ಬಂದು ಗೌಡನ ಕಾಲು ಹಿಡಿದುಕೊಂಡ.

ತನ್ನ ಗಂಡನ ಈ ದೈನೇಸಿ ಸ್ಥಿತಿ ನೋಡಿ ಸುಮಂಗ್ಲಿಯ ಕುದಿ ಮತ್ತಷ್ಟು ಹೆಚ್ಚಾಯಿತು. ಕೊಡಲಿ ಹಿಡಿದುಕೊಂಡೇ ಸ್ವಲ್ಪ ಮುಂದಕ್ಕೆ ಬಂದಳು. ಗೌಡ ತನ್ನ ಕಾಲುಹಿಡಿದುಕೊಂಡಿದ್ದ ಕೆಂಚನನ್ನು ಜಾಡಿಸಿ ಕೆಳಕ್ಕೆ ಬೀಳಿಸಿ 'ಏನ್ ತಪ್ಪಾತ್ರಿಗೌಡ್ರ ತುಪ್ಪಾತ್ರಿ. ಗೌಡ್ರ ಸುಳೆಮಗನೇ ನಿನ್ನಿಂದಾಗಿ ನಾನ್ ಇವತ್ ಆ ಇಮಾಲ್ ಶೆಟ್ಟಿ ಕೂಡ ಅನ್ನಿಸ್ಗಿಳಂಗ್ ಆತ್. ಮತ್ತ ನಾಕ್ ಮಂದಿ ಮುಂದ ಎದಿನಿಗಿರಿಸ್ಗಿಂಡ್ ಅಡ್ಡಾಡ್ದಂಗ್ ಆತ್. ನಾ ಇವತ್ ನೀನ್ ಏನ್ ನೆವ ಹೇಳಿದ್ರೂ ಕೇಳ ಮಗಾ ಅಲ್ಲಾ ಎಲ್ಲಿ ನನ್ ರಕ್ಕ? ಎಲ್ಲಿ ನನ್ ರಕ್ಕ? ಎಲ್ಯಲೇ ನನ್ ರಕ್ಕ?' ಎಂದು ಕಿರುಚಾಡಿದ. ಅಷ್ಟೊತ್ತಿಗೆ ಲುಂಗಿ ಏರಿಸಿಕೊಂಡು ಮೂಗು ನಿಗುರಿಸಿಕೊಂಡು ಬಂದ 'ನಾಕ್ ಮಂದಿ' ಸುಮ್ಮನೆ ನೋಡುತ್ತ ನಿಂತರು. ಕೆಂಚ ಸಾವರಿಸಿಕೊಂಡು ಮೇಲೆದ್ದು 'ತಪ್ಪಾತ್ರಿ ಗೌಡ್ರ ನಂದ್ ತಪ್ಪಾಗ್ಬುಡ್ತಿ ನಾಳೆ ಗ್ಯಾಫುಂಟ ನಿಮ್ ರಕ್ಕ ತಂದ್ ಕೊಡುತ್ನು' ಎಂದು ಬೇಡಿಕೊಂಡ. ಗೌಡ, ' ಏನ್ ನಾಳೆ ಕೊಟ್ಟುಬಿಡ್ತಿ.? ಎಷ್ಟ್ ದಿಸದಿಂದ ಹಿಂಗಾ ಹೇಳಾಕತ್ತಿಲ್ ನೀ. ಅಲ್ಲಾಲೇ ರಕ್ಕ ಇಸ್ಗಂಡ್ ಮದ್ವಿ ಆಗಕ್ ಬರುತ್ತು ಕೊಟ್ ರೊಕ್ಕಾ ವಾಪಸ್ ಕೊಡಾಕೇನ್ ಹಟ್ಟಾರನು ನಿನ್ನಾ? ನಾಳೆ ಪಾಳೆ ಕೇಳಾಕ್ ಬಂದಿಲ್ಲ ನಾನಿವತ್. ಸದ್ಯ ಅಂದ್ರ ಸದ್ಯ ಬೇಕ್ ರಕ್ಕ' ಎಂದು ಕೆಂಚನ ಬನ್ನೀನು ಜಗ್ಗಿ ಹಿಡಿದು ಕಣ್ಣು ಮತ್ತಷ್ಟು ಕೆಂಪು ಮಾಡಿಕೊಂಡು ಕೇಳಿದ. ಕೆಂಚನ ಮುಕುಳಿ ಸಡಿಲಾಯ್ತು. ಏನು ಹೇಳಬೇಕು ತೋಚಲಿಲ್ಲ. ಇದಕ್ಕೆ ಅವನು ಸಿದ್ದನಾಗಿರಲಿಲ್ಲ. ಇವತ್ತು ರಾತ್ರಿ ಈ ಊರಿನಿಂದ, ತನ್ನೆಲ್ಲ ತಿಪ್ಲಗಳಿಂದ ಪಾರಾಗಿಬಿಡುತ್ತೇನೆ ಎಂದುಕೊಂಡಿದ್ದವನಿಗೆ ಇದ್ದಕ್ಕಿದ್ದ ಹಾಗೆ ಎಲ್ಲ ಕಷ್ಟಗಳೂ ಬಂದು ಎದೆಮೇಲೆ ಕೂತ ಹಾಗಾಗಿತ್ತು ಈಗ.

ಕೆಂಚ, 'ಗೌಡ್ರ.. ಅದು ಗೌಡ್ರ ಇವತ್ ಒಂದಿಸ ಗೌಡ್ರ ದೇವ್ರಾಣಿ ನಾಳೆ ತಂದ್‌ಕೊಡುತ್ನು ಗ್ಯಾಫುಂಟ ನಾಳೆ ತಂದ್‌ಕೊಡುತ್ನು , ಗ್ಯಾಫುಂಟ ನಾಳೆ ತಂದ್ ಕೊಡುತ್ನು' ಎಂದು ಮತ್ತಷ್ಟು ದೈನ್ಯನಾಗಿ ಬೇಡಿಕೊಂಡ. ಅವನು ಅಷ್ಟು ಕುಗ್ಗಿರೋದು ನೋಡಿ ಸುಮಂಗ್ಲಿಗೆ ಅವನ ಮೇಲೆ ಕನಿಕರವಾಯಿತು. ಕೈಲಿರುವ ಕೊಡಲಿ ತೆಗೆದುಕೊಂಡು ಗೌಡನ ತಲೆಗೊಂದು ಹೆಟ್ಟಬೇಕೆನ್ನುವಷ್ಟು ರೊಚ್ಚಾಯಿತು, ಗೌಡ, ಕೆಂಚನ ಬನೀನು ಹರಿಯುವಂತೆ ಮತ್ತಷ್ಟು ಜಗ್ಗಿ ಹಿಡಿದು 'ಏನ್ ಹಿಂಗ್ ಅತ್ತಂಗ್ ಪತ್ತಂಗ್ ಮಾಡ್ಬಿಟ್ರ ನಾನ್ ಸುಮ್ಮಾ ವೋಗ್ ಬುಡುತ್ನು ಅಂದ್ಕಂಡ್ಯಾ ಏನ್ ಕತಿ? ಇವತ್ ನಾನ್ ಹೋಗಾಕ್ ಬಂದಿಲ್ಲಾ ತಿಳ್ಕಾ ಈಗಾ ಏನರ ಮಾಡಿ ರೊಕ್ಕಾ ಕೊಟ್ಟೀ ಉಳ್ಕಂತಿ ಇಲ್ಲಾಂದ್ರ ಈ ನಿನ್ ಹೆಂಡ್ತೀನ ಅಗಸ್ಯಾಗ್ ನಿಂದ್ರಿಸಿ ಹಡಾಕೂ ಹಿಂದ್ಮುಂದ್ ನೋಡಲ್ ನಾ' ಎಂದು ಅಬ್ಬರಿಸಿದ. ಈಗ ಮಾತ್ರ ಸುಮಂಗ್ಲಿಗೆ ತಡೆದುಕೊಳ್ಳಲಿಕ್ಕಾಗಲಿಲ್ಲ. 'ಯಾಕ್ ಪಾ ಗೌಡ ಬರತ್ನ್ಯಾಗ್ ಹೇಲ್ ಗೀಲ್ ತಿಂದ್ಕಂಡ್ ಬಂದೀ ಏನ್ ಕತಿ? ಯಾಕಾ ಏನೇನ ಮಾತಾಡಕತ್ತೀಯಲ?' ಎಂದು ಪ್ರಶ್ನಿಸಿದಳು ಸಿಟ್ಟಿನಿಂದ. ಅಷ್ಟೊತ್ತು ಕೈಕಟ್ಟಿಕೊಂಡು ನಿಂತಿದ್ದ 'ನಾಕ್ ಮಂದಿ' ಈಗ ಎದೆ ಮೇಲಿದ್ದ ಕೈಗಳನ್ನು ತೆಗೆದು ಬಾಯಿಮೇಲೆ ಇಟ್ಟುಕೊಂಡರು. ಸುಮಂಗ್ಲಿಯ ಮಾತು ಕೇಳಿ ಗೌಡನಿಗೆ ಮತ್ತಷ್ಟು ಮುಕುಳಿ ಉರಿಯಿತಲ್ಲದೆ ಸ್ವತಃ ಆಕೆಯ ಗಂಡ ಕೆಂಚನಿಗೇ ಅವಳ ಮೇಲೆ ಮೈಕೈಯೆಲ್ಲಾ ಸಿಟ್ಟು ಬಂದುಬಿಟ್ಟಿತು. ಗೌಡನ ಕುರಿತಾದ ಅವನೊಳಗಿನ ಸ್ವಾಮಿನಿಷ್ಠೆ ನಿಗುರಿ ನಿಂತು 'ಏ ನಿಮ್ಮೌನ್ ಬಾಯ್ ಮುಚ್ಚು' ಎಂದು ಗದರಿಸಿದ. ಸುಮಂಗ್ಲಿ, 'ನಾನ್ಯಾಕ್ ಬಾಯ್‌ಮುಚ್ಲಿ? ಅಗಸ್ಯಾಗ್ ನಿಂದ್ರಿಸಿ ಹಡಾಕ್ ನಾನೇನ್ ಬಿಟ್ಟಿ ಸಿಕ್ಕೀನನು? ಅವ್ನ್ ಮನಿ ಹೆಣ್ಮಕ್ಳಿಗ್ ಯಾರರೆ ಹಿಂಗ್ ಅಂದ್ರ ಸುಮ್ಕಿರ್ತಾನನು ಈ ಗಣಮಗ?' ಎಂದು ಎದುರಾಡಿದಳು. ಈ ಮಾತಿಗೆ ಮತ್ತಷ್ಟು ಕೆರಳಿದ ಗೌಡ, 'ಏನ್ ಇಬ್ರೂ ಆಟ ಅಚ್ಚೀರನು ನನ್ ಮುಂದ? ಈ ಸುಳೆಮಗ್ನಗ ಮದ್ವಿ ಮಾಡಿಕ್ಯಳಾಕ್ ರಕ್ಕ ಕೊಟ್ಟಿದ್ದಲ್ದ ಅವ್ನ್ ಹೇಂತಿ ಕೂಡ ಅನ್ನಿಸ್ಕಳದ್ ಆತಪೋ ನನ್ ಬಾಳೆವು. ಇವತ್ ಈ ಸುಳೆಮಗನ್ ಉಳ್ಯಾಕ್ ಬುಡಲ್ ನಾ' ಎಂದು ಬಿಗಿಹಿಡಿದಿದ್ದ ಬನೀನಿನ ಸಮೇತ ಕೆಂಚನನ್ನು ಜೋರಾಗಿ ಹಿಂದಕ್ಕೆ ನೂಕಿ ಘರ್ಜಿಸಿದ.

ಅಷ್ಟು ದೂರ ಹೋಗಿ ಬಿದ್ದ ಕೆಂಚನಿಗೆ ಸುಮಂಗ್ಲಿಯನ್ನು ಅಲ್ಲೇ ಕಡಿದು ಹಾಕುವಷ್ಟು ಸಿಟ್ಟು ಬಂತು. 'ಏ ನಿಮ್ಮೌನ್ ಸುಮ್ನಿರಾಕೇನ್ ಹಟ್ಟಾರನು ನಿನಿಗೆ ಹಟ್ಟಾರನು ನಿನಿಗೆ? ಹಟ್ಟಾರನು ನಿನಿಗೆ?' ಎಂದು ಹಲ್ಲುಕಡಿಯುತ್ತ ಎದ್ದು ಹೋಗಿ ಎರಡೂ ಕೈಗಳಿಂದ ಅವಳ ಕುತ್ತಿಗೆ ಹಿಡಿದು ಗಟ್ಟಿಯಾಗಿ ಹಿಚುಕತೊಡಗಿದ. ಈಗ 'ನಾಕ್ ಮಂದಿ'ಯ ಕೈಗಳು ಮತ್ತೆ ತಮ್ಮ ಎದೆಮೇಲೆ ಬಂದವು. ತನ್ನ ಗಂಡನ ಈ ಅನಿರೀಕ್ಷಿತ ಆಕ್ರಮಣದಿಂದ ದಿಕ್ಕೆಟ್ಟ ಸುಮಂಗ್ಲಿಯ ಕಣ್ಣುಗಳು ವಿಲ ವಿಲ ಒದ್ದಾಡತೊಡಗಿದವು. ಧ್ವನಿ ಉಸಿರುಗಳೆರಡೂ ಗಂಟಲಲ್ಲೇ ಸಿಕ್ಕಿಕೊಂಡು ಹೆಣಗಾಡಿ ಹೊರಬರಲು ಪ್ರಯತ್ನಿಸುತ್ತಿದ್ದವು. ಆದರೆ ಅವಳ ಮೇಲಿನ, ಗೌಡನ ಮೇಲಿನ, ಜಗತ್ತಿನ ಮೇಲಿನ, ತನ್ನ ಮೇಲಿನ ಸಿಟ್ಟೆಲ್ಲವನ್ನೂ ಅವಳೊಬ್ಬಳ ಮೇಲೆಯೇ ತೀರಿಸಿಕೊಂಡು ಬಿಡುವಂತೆ ಬಲವಾಗಿ ಅವಳ ಕುತ್ತಿಗೆ ಹಿಚುಕಿ ಹಿಡಿದಿದ್ದ ಕೆಂಚನಿಗೆ ಅಷ್ಟಕ್ಕೇ ಸಮಾಧಾನವಾಗದೆ ಅವಳನ್ನ ಬೀಸಿ ನೆಲಕ್ಕೆ ಅಪ್ಪಳಿಸಿದ. ಈ ಏಟಿಗೆ ಅವಳ ಉಸಿರು ಹೊಟ್ಟೆಯಲ್ಲೇ ಹೂತುಕೊಂಡಿತು. ಅವಳೊಂದಿಗೆ ಅವಳು ಕೈಲಿ ಹಿಡಿದಿದ್ದ ಕೊಡಲಿಯೂ ಇಷ್ಟು ದೂರ ಹೋಗಿ ಬಿದ್ದು ಕಟ್ ಎಂದು ಸದ್ದು ಮಾಡಿತು. ಅದರ ಸದ್ದಿಗೆ ಮತ್ತಷ್ಟು ಆವೇಶಗೊಂಡ ಕೆಂಚ ಅದನ್ನೆತ್ತಿಕೊಳ್ಳಲು ಹೊರಟ. ಈಗ 'ನಾಕ್ ಮಂದಿ'ಯ ಹುಬ್ಬುಗಳು ಆಶ್ಚರ್ಯದಿಂದ ಚೂರು ಗಂಟಿಕ್ಕಿದ್ದವು. ನೆಲಕ್ಕೆ ಬಿದ್ದು ಏಳಲು ಪ್ರಯತ್ನಿಸುತ್ತಿದ್ದ ಸುಮಂಗ್ಲಿಗೆ ತನ್ನ ಗಂಡ ಕೊಡಲಿ ಹಿಡಿದು ಬರುತ್ತಿರುವುದು ನೋಡಿ ಜೀವ ಬಾಯಿಗೆ ಬಂದಹಾಗಾಯಿತು. ಶಕ್ತಿಯೆಲ್ಲ ಒಟ್ಟುಹಾಕಿ ಎದ್ದು ಓಡತೊಡಗಿದಳು. ಅವಳ ಓಟದಿಂದ ಮತ್ತಷ್ಟು ಆವೇಶಿತನಾದ ಕೆಂಚ 'ಏ ನಿಮ್ಮೌನ್ ಅಡಾವುಡಿ' ಎಂದು ಕೊಡಲಿ ಬೀಸುತ್ತ ಅವಳ ಹಿಂದೆಯೇ ಓಡತೊಡಗಿದ. ಇಷ್ಟೊತ್ತು ಕೆಂಚನ ಉಗ್ರಾವತಾರ ನೋಡಿ ಬಾಯಿತೆರೆದುಕೊಂಡು ನಿಂತಿದ್ದ ಗೌಡ ಈಗ ಎಚ್ಚರವಾದವನಂತೆ, 'ನಿಲ್ಲಲೇ ಕೆಂಚ ನಿಲ್ಲಲೇ' ಎಂದು ಅವನ ಹಿಂದೆ ಓಡತೊಡಗಿದ. ಮುಂದೇನಾಗುತ್ತದೆ ಎಂದು ನೋಡಿ ತಣಿಯುವ ಕುತೂಹಲದಿಂದ 'ನಾಕ್ ಮಂದಿ'ಯೂ ಅವರ ಹಿಂದೆ ಓಡತೊಡಗಿದರು.

ಸುಮಂಗ್ಲಿ ಓಡುತ್ತ ಓಡುತ್ತ ಕೇರಿ ದಾಟಿ ಬೇಲಿ ದಾಟಿ ಹೇಲುಗೇರಿ ದಾಟಿ ನೀರಿಲ್ಲದೆ ಬಿರುಕುಬಿಟ್ಟ ಹೊಲಗಳ ಬಯಲಿಗೆ ಬಂದರೂ ನಿಲ್ಲುವ, ಹಿಂತಿರುಗಿ ನೋಡುವ ಧೈರ್ಯ ಮಾಡದೆ ಓಡುತ್ತಿದ್ದಳು. ಬಿಸಿಲು ಮೇಲಿಂದ ಕೆಳಕ್ಕೆ ಸುಡುತ್ತಿತ್ತು. ನಾಲಗೆ ಗಂಟಲೆಲ್ಲಾ ಆರಿ ಉರಿಯುತ್ತಿತ್ತು. ಕಾಲಲ್ಲಿ ರಕ್ತ ಸುರಿಯುತ್ತಿತ್ತು. ಸೀರೆ ಹಿಂದೆಯೆಲ್ಲೋ ಬೇಲಿಗೆ ಸಿಕ್ಕು ಹರಿದು ಹಂಚಿ ಹೋಗಿತ್ತು. ಅವಳನ್ನು ಹಿಡಿದು ಸಣ್ಣಾಗಿ ಕಡಿಯುವ ಆವೇಶದಿಂದ ಹಿಂದೆ ಬಿದ್ದಿದ್ದ ಕೆಂಚನೂ ಕಾಲಲ್ಲಿನ ಮೀನಖಂಡಗಳು ಬೆಂಕಿಯಂತೆ ಉರಿಯುತ್ತಿದ್ದರೂ ನಿಲ್ಲದೆ ಅವಳ ಹಿಂದೆ ಓಡುತ್ತಿದ್ದ. ಅವನ ಹಿಂದೆ ಬಿದ್ದಿದ್ದ ಗೌಡ ಕೂಡ ಉಸ್ ಉಸ್ ಮಾಡುತ್ತ ಅವನ ಬೆನ್ನುಹತ್ತಿದ್ದ. ಮೂವರಿಗೂ ಬೆವರು ಬಸಿಯೋದು ನಿಂತು ರಕ್ತ ಬಸಿಯಲಿಕ್ಕೆ ಸುರುವಾಗಿದ್ದರೂ ಓಡುತ್ತಲೇ ಇದ್ದರು. ನಿಲ್ಲುವ, ಹಿಂತಿರುಗಿ ನೋಡುವ ಧೈರ್ಯ ಒಬ್ಬರಿಗೂ ಇರಲಿಲ್ಲ.

ಪ್ರತಿಕ್ರಿಯಿಸಿ: feedback@sudha.co.in